# ಆಹಾ ಸುದ್ದಿ!

★ ಸಸಿತೋಟ

ಅಮೆರಿಕಾದ ಬ್ಲ್ಯಾಂಡ್‌ಫೋರ್ಡ್ ಇಂಗ್ಲೆಂಡ್‌ನ ಅಲೆಕ್ಸ್ ಎಂಬಾಕೆಯನ್ನು ಪ್ರೀತಿಸಿ ಮದುವೆಯಾಗುವವನಿದ್ದ. ಮದುವೆ ಮೂರು ದಿನಗಳಿರುವಾಗ ಏನಾಯ್ತೋ ಏನೋ ವರ ಖಿನ್ನತೆಯಿಂದ ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂದು ತಾನೇ ವಧುವಿಗೆ ಸುಳ್ಳು ಸುದ್ದಿ ಮುಟ್ಟಿಸಿದ. ಸಂತಾಪ ತಿಳಿಸಲು ವರನ ತಾಯಿಗೆ ಫೋನ್ ಮಾಡಿದಾಗ ಸತ್ಯ ಗೊತ್ತಾಗಿ ಅಲೆಕ್ಸ್ ಈಗ ಸನ್ಯಾಸಿನಿ ಆಗಿದ್ದಾಳಂತೆ. ಈ ಬ್ಲ್ಯಾಂಡ್ ಜೊತೆ ಬ್ಲೈಂಡ್ ಡೇಟ್ ಮಾಡಬೇಡಿ ಎಂದು ಸಾಮಾಜಿಕ ಜಾಲತಾಣದಲ್ಲಿ ಎಚ್ಚರಿಕೆ ಸಂದೇಶ ಓಡಾಡುತ್ತಿದೆಯಂತೆ. ಸುಳ್ಳು ಹೇಳಿದ್ದಕ್ಕೆ ಬಲವಂತದ ಬ್ರಹ್ಮಚರ್ಯ.



ಚೀನಾದ ಕಲಾವಿದೆ ಝೋ ಜೈ '36 ದಿನಗಳು' ಎಂಬ ಕಲಾ ಯೋಜನೆ ಆರಂಭಿಸಿದ್ದಾಳೆ. ಅಂದರೆ ಕಲಾ ಗ್ಯಾಲರಿಯಲ್ಲಿ 36 ದಿನಗಳ ಕಾಲ ಈ ಅರ್ಧ ನೇಯ್ದ ತಂತಿಯ ಹಾಸಿಗೆ, ಮೊಬೈಲ್ ಹಾಗೂ ಕೆಲವೇ ತಿನಿಸುಗಳ ಜೊತೆ ಜೀವಿಸುವುದು. ಯಾರು ಬೇಕಾದರೂ ಬಂದು ನೋಡಿ, ಚರ್ಚಿಸಬಹುದಂತೆ. ಆಕೆಯ ಸ್ನಾನ, ಉಡುಪು ಧರಿಸುವುದು, ಆಗಾಗ ಭೇಟಿ ನೀಡುವ ಸ್ನೇಹಿತನ ಜೊತೆಗಿನ ಪ್ರೇಮ ಸಲ್ಲಾಪ ಎಲ್ಲವನ್ನೂ ಕ್ಯಾಮೆರಾ ಕಣ್ಣುಗಳು ಸೆರೆ ಹಿಡಿಯುತ್ತಿವೆ. ಇದು ಕಲಾ ಪ್ರದರ್ಶನವೋ ಅಥವಾ ಬರೀ ಪ್ರದರ್ಶನವೋ!



ಗಾಯಕಿ ವಿಲ್ಲಿ ನೆಲ್ಸನ್ ಜಡೆಗಳಿವು. 80ರ ದಶಕದಲ್ಲಿ ಕತ್ತರಿಸಿ ಕಾಯ್ದಿಡಲಾಗಿತ್ತಂತೆ. ಈಗ ಹರಾಜಿಗಿಡಲಾಗಿದ್ದು 60,000 ಡಾಲರ್ (ಅಂದಾಜು 36 ಲಕ್ಷ ರೂಪಾಯಿ) ಗೆ ಮಾರಾಟವಾಗುತ್ತದೆಂದು ಅಂದಾಜಿಸಲಾಗಿದೆಯಂತೆ. ಕೇವಲ ಕೂದಲಿಗೇ ಇಷ್ಟು ಹಣ. ಖ್ಯಾತನಾಮರು ದೇಹದ ಅಂಗೋಪಾಂಗಗಳನ್ನು ಕಾದಿಡುತ್ತ ಹೋದರೆ ಮುಂದೆ ಅವರ ವಾರಸುದಾರರು ಕೋಟ್ಯಂತರ ಹಣ ಸಂಪಾದಿಸಬಹುದು.



ಮಲೇಷ್ಯಾದ ಹಾರೂನ್ ಮೊಹ್ಮದ್ 'ಮೀನಿನ ಶ್ರೋತೃ'. ಕಡಲೊಳಗೆ ಮುಳುಗಿ ಮೀನಿನ ಸದ್ದು ಆಲಿಸುವುದು ಅಲ್ಲಿಯ ಸಾಂಪ್ರದಾಯಕ ಕಲೆ. ಈ ಕಲೆ ಈಗ ಅಳಿವಿನ ಅಂಚಿನಲ್ಲಿದೆಯಂತೆ. ಮೀನಿನ ಅಳು, ನಗು ಆಲಿಸುತ್ತ ಕೂತರೆ ಪಳದ್ಯಕ್ಕೆ ಮೀನು ಹಿಡಿಯುವುದಕ್ಕಾಗುತ್ತದೆಯೇ ಎಂದು ಈಗಿನ ಮೀನುಗಾರರು ಪ್ರಶ್ನಿಸುತ್ತಾರಂತೆ.



ದಕ್ಷಿಣ ಆಫ್ರಿಕಾದ ರಾಷ್ಟ್ರೀಯ ಉದ್ಯಾನವನದಲ್ಲಿ ತೆಗೆದ ಚಿತ್ರವಿದು. ಸುಮ್ಮನೆ ಸಾಗುತ್ತಿದ್ದ ಆನೆಯ ಹೊಟ್ಟೆಗೆ ತುರಿಕೆ ಬಂದಿರಬೇಕು. ಹಾಗಂತ ನಿಂತಿದ್ದ ಕಾರಿನ ಮೇಲ್ಭಾಗಕ್ಕೆ ಹೊಟ್ಟೆ ಉಜ್ಜುವುದೇ! ಒಳಗಿದ್ದವರು ಅಂಗೈಲಿ ಜೀವ ಹಿಡಿದು ಕೂತರೆ ಮಾರ್ಗದರ್ಶಿ ಫೋಟೊ ಕ್ಲಿಕ್ಕಿಸುವುದರಲ್ಲಿ ಮಗ್ನನಾಗಿದ್ದನಂತೆ. ಕೆಟ್ಟ ಸಮಯದಲ್ಲಿ, ಕೆಟ್ಟ ಜಾಗದಲ್ಲಿ ಹೋದರೆ ಗ್ರಹಚಾರವೂ ಕೆಡುತ್ತದೆ.

ಬ್ಯಾಂಕಾಕ್‌ನ ಮೊರ್ಟಾವೊ 'ಸೆಲ್ಫಿ ರಾಣಿ' ಎಂಬ ಹೆಸರನ್ನು ಸಂಪಾದಿಸಿದ್ದಾಳಂತೆ. 40ರ ಈ ಮಹಿಳೆ ವಾರಕ್ಕೆ ಸರಾಸರಿ ತನ್ನದೇ 200 ಫೋಟೋಗಳನ್ನು ತೆಗೆದುಕೊಂಡು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡುತ್ತಾಳೆ. ಇದುವರೆಗೆ 12,000 ಫೋಟೋಗಳನ್ನು ಪೋಸ್ಟ್ ಮಾಡಿದ್ದು ಎಲ್ಲವೂ ವೈವಿಧ್ಯಮಯವಂತೆ. ಕಾರಣ ಕೇಳಿದರೆ 'ವೈಯಕ್ತಿಕ' ಎಂದಳಂತೆ. ಸಾಮಾಜಿಕ ಜಾಲತಾಣದಲ್ಲಿ ಖುಲ್ಲಂ ಖುಲ್ಲಾ ಮಾಡುವುದೆಂದರೆ ಅದು ಹೇಗೆ ವೈಯಕ್ತಿಕವೋ!